2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಕನಕಪುರ

ಸಿ.ಸಿ ನಂ:453 /2014

| | | | |
|---|---|---|---|
| ಚಾಸಾ ಃ | 2 | ಪ್ರಾಸಾಃ- | 2 |

| | |
|---|---|
| ಹೆಸರು | ಶಿವಲಿಂಗಯ್ಯ |
| ತಂದೆಯ ಹೆಸರು / ಗಂಡನ ಹೆಸರು | ಹೊಂಬೇಗೌಡ |
| ವಯಸ್ಸು | 70 |
| ಉದ್ಯೋಗ | ವ್ಯವಸಾಯ |
| ವಿಳಾಸ | ದೊಡ್ಡಮುದುವಾಡಿ |

- - - - - - - - - - - - - - - - - - - - - - - - - - - - - - -

ದಿಃ14.06.2016ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

ಆರೋಪಿಗಳು ನನಗೆ ಗೊತ್ತು . ಚಾಸಾ-1 ನನ್ನ ಮಗ ಸುಮಾರು 6 ವರ್ಷಗಳ ಹಿಂದೆ, ಸಂಜೆ ಸುಮಾರು 6ಗಂಟೆ ಸಮಯದಲ್ಲಿ ನಾನು ತನ್ನ ಮನೆಯಲ್ಲಿ ಇದ್ದಾಗ ಆರೋಪಿಗಳು ದೊಣ್ಣೆ, ರೀಪೀಸ್ ಪಟ್ಟಿ ಮಚ್ಚು, ರಾಡುಗಳನ್ನು ಹಿಡಿದುಕೊಂಡು ಬಂದಿದ್ದು ನನ್ನ ತೊಡೆ, ಕೈ,ಕಾಲು, ಮತ್ತು ಮೈಕೈಗೆ ಹೊಡೆದರು. ಚಾಸಾ-5 ಬಂದಾಗ ಆತನಿಗೂ ಆರೋಪಿಗಳು ದೊಣ್ಣೆ, ರೀಪೀಸ್ ಪಟ್ಟಿ ಮಚ್ಚು, ರಾಡುಗಳಿಂದ ಹೊಡೆದರು. ನನ್ನ ಪತ್ನಿ ಚಾಸಾ-3ರವರನ್ನು ನೆಲಕ್ಕೆ ಉರುಳಿಸಿದ್ದು ತಲೆಗೆ ಏಟಾಗಿರುತ್ತದೆ. ಆರೋಪಿಗಳು ಚಾಸಾ-3ರವರಿಗೆ ದೊಣ್ಣೆಗ್ಗಳಿಂದ ಹೊಡೆದಿರುತ್ತಾರೆ. ಚಾಸಾ-4ರವರು ಕೇಳಲು ಬಂದಾಗ ಆಕೆಗೂ

ದೊಣ್ಣೆಗಳಿಂದ ಆರೋಪಿಗಳು ಹೊಡೆದರು. ಚಾಸಾ-6ರವರಿಗೆ ಆರೋಪಿಗಳು ದೊಣ್ಣೆ ರಾಡುಗಳಿಂದ ತೊಡೆಗೆ ಹೊಡೆದಿರುತ್ತಾರೆ. ಚಾಸಾ-1ರವರು ಬಂದಾಗ ಅವರ ಮೂತಿಗೆ ಕೈಯಿಂದ ಹೊಡೆದು ಗಾಯಪಡಿಸಿದರು. ಆರೋಪಿಗಳು ಚಾಸಾ-1ರವರ ತಲೆಗೆ ದೊಣ್ಣೆಯಿಂದ ಹೊಡೆದು ತೀವ್ರ ರಕ್ತಗಾಯ ಮಾಡಿದರು. ನಂತರ ಗಾಯಗೊಂಡ ನಮ್ಮನ್ನು ಕನಕಪುರ ಆಸ್ಪತ್ರೆಗೆ ಕರೆದುಕೊಂಡು ಹೋದರು. ಘಟನೆಯ ಬಗ್ಗೆ ಪೋಲಿಸರು ನನ್ನ ವಿಚಾರಣೆ ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಎಂಓ-1ರಿಂದ 6ನ್ನು ನೋಡಿ ಗುರ್ತಿಸಿರುತ್ತಾರೆ. ಅವುಗಳಿಂದಲ್ಲೆ ಆರೋಪಿಗಳು ನಮಗೆ ಹೊಡೆದಿರುತ್ತಾರೆ.

ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ನೀಡಲಾಯಿತು.

ಪಾಟೀ ಸವಾಲು ಶ್ರೀ ಎಪಿಪಿ ವಕೀಲರಿಂದಃ-

ಆರೋಪಿಗಳು ಎಂಓ-7 ಕಲ್ಲನ್ನು ಸಹ ಎಂಓ-1ರಿಂದ 6ರೊಂದಿಗೆ ಹಿಡಿದುಕೊಂಡು ಬಂದಿದ್ದರು ಅಂದರೆ ಸರಿ. ಆರೋಪಿಗಳು ನಮ್ಮ ಮನೆಯ ಬಾಗಿಲನ್ನು ನೂಕಿ ಅಕ್ರಮ ಪ್ರವೇಶ ಮಾಡಿರುತ್ತಾರೆ ಅಂದರೆ ಸರಿ. ಆರೋಪಿಗಳು ಚಾಸಾ-4ರವರನ್ನು ಕೆಳಕ್ಕೆ ಕೆಡವಿ ಆಕೆಯ ಮಾಂಗಲ್ಯ ಸರವನ್ನು ಕಿತ್ತು ಹಾಕಿ ಕಾಲುಗಳಿಂದ ಒದ್ದರು ಅಂದರೆ ಸರಿ. ಆರೋಪಿಗಳು ಮಚ್ಚನ್ನು ತೋರಿಸಿ ಇನ್ನೊಂದು ಸಲ ಅಡ್ಡಬಂದರೆ ಮಚ್ಚಿನಿಂದ ಕೊಲೆ ಮಾಡುವುದಾಗಿ ಚಾಸಾ-1ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಅಂದರೆ ಸರಿ. ನನ್ನೊಂದಿಗೆ ಚಾಸ-1, 3ರಿಂದ 6ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದರು ಅಂದರೆ ಸರಿ.

ಪಾಟೀ ಸವಾಲಿಗೆ ಸಮಯಕೋರಿದ್ದು ನೀಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ